ಒ.ಎಸ್. ನಂ.21/2018
ಡಿಡಬ್ಲು-1

ದಿನಾಂಕ 19.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಿಂದ

ನನ್ನ ಅಜ್ಜನ ಹೆಸರು ಮಲ್ಲಪ್ಪ ಆನೆಗುಂದಿ ಎಂದರೆ ಸರಿ. ಸರ್ವೆ ನಂ.105 ಈ ಮೊದಲು ನನ್ನ ಅಜ್ಜನ ಹೆಸರಿನಲ್ಲಿತ್ತು ಎಂದರೆ ಸರಿ. ನನ್ನ ಅಜ್ಜ ಮಲ್ಲಪ್ಪನಿಗೆ 05-ಜನ ಮಕ್ಕಳು ಎಂದರೆ ಸರಿ. ಅವರ ಹೆಸರು ಸಿದ್ದಪ್ಪ, ಹೊನ್ನಪ್ಪ, ಕರಬಸಪ್ಪ, ಹಣಮಂತರಾಯ ಮತ್ತು ಸಕ್ರೆಮ್ಮ ಎಂದರೆ ಸರಿ. ಸಕ್ರೆಮ್ಮರವರನ್ನು ಅಣಜಗಿ ಗ್ರಾಮದಲ್ಲಿ ಮದುವೆ ಮಾಡಿಕೊಟ್ಟಿರುತ್ತಾರೆ ಅವರ ಗಂಡನ ಹೆಸರು ದೇವಿಂದ್ರಪ್ಪ ಎಂದರೆ ಸರಿ. ಸಿದ್ದಪ್ಪರವರಿಗೆ ಅಮೃತ, ಶಿವಶರಣಪ್ಪ ಮತ್ತು ಬಸವರಾಜ ಎಂಬ ಮಕ್ಕಳಿರುತ್ತಾರೆ ಎಂದರೆ ಸರಿ. ಹಣಮಂತರಾಯರವರಿಗೆ ದೇವಿಂದ್ರಪ್ಪ, ಶಿವಶರಣಪ್ಪ ಮತ್ತು ಶಿವರಾಜ ಎಂಬ ಮಕ್ಕಳಿರುತ್ತಾರೆ ಎಂದರೆ ಸರಿ.

ಸಿದ್ದಪ್ಪರವರ ಮಗ ಅಮೃತ ಮತ್ತು ಹಣಮಂತರಾಯನ ಮಗ ದೇವಿಂದ್ರಪ್ಪ ಮತ್ತು ನನ್ನ ನಡುವೆ ಒಳ್ಳೆಯ ಸಂಬಂಧ ಇದೆ ಎಂದರೆ ಸರಿ. ವಾದಿಯ ಅಡ್ಡ ಹೆಸರು ಆನೆಗುಂದಿ ಎಂದರೆ ನನಗೆ ಗೊತ್ತಿಲ್ಲ. ವಾದಿ ಕರಕಿಹಳ್ಳಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ವಾದಿ, ವಾದಿಯ ತಾಯಿ, ವಾದಿಯ ಅಣ್ಣ ಹುಟ್ಟಿದಾಗಿನಿಂದ ಕರಕಿಹಳ್ಳಿಯಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿ ಕಳೆದ 15-ವರ್ಷಳಿಂದ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಕರಣ ದಾಖಲಿಸಿದ ನಂತರ ವಾದಿ ಯಾರು ಮತ್ತು ವಾದಿಯ ತಂದೆ ಯಾರು ಎಂದು ತಿಳಿದುಕೊಳ್ಳಲು ಪ್ರಯತ್ನಿಸಿರುತ್ತೀರಾ ಎಂದರೆ ಸಾಕ್ಷಿ ನಾನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ ಎಂದು ನುಡಿಯುತ್ತಾರೆ. ವಾದಿ ಯಾರು ಮತ್ತು ವಾದಿಯ ತಂದೆ ಯಾರು ಎಂದು ತಿಳಿದುಕೊಳ್ಳಲು ನಿಮಗೆ ಏನಾದರೂ ಸಮಸ್ಯೆ ಇತ್ತಾ ಎಂದರೆ ಸಾಕ್ಷಿ ಮೌನವಿದ್ದು ಯಾವುದೆ ಉತ್ತರ ನೀಡಿರುವುದಿಲ್ಲ. ಸಕ್ರೆಪ್ಪರವರ ಮಗನ ಹೆಸರು ರೇವಣಸಿದ್ದಪ್ಪ ಇದ್ದು ಅವರ ವಕೀಲರಾಗಿರುತ್ತಾರೆ ಎಂದರೆ ಸರಿ. ನನ್ನ ಹಾಗೂ ರೇವಣಸಿದ್ದಪ್ಪರವರ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿ.

ದಾವಾ ಆಸ್ತಿಯಲ್ಲಿ 03-ಎಕರೆ ಜಮೀನು ರೇವಣಸಿದ್ದಪ್ಪರವರ ಹೆಸರಿನಲ್ಲಿ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಕಳೆದ 15-ವರ್ಷಗಳಿಂದ ರೇವಣಸಿದ್ದಪ್ಪರವರ

ಹೆಸರು ಬಂದಿರುತ್ತದೆ ಎಂದರೆ ಸರಿ. ಈ ವಿಷಯ ನನ್ನ ತಂದೆಗೆ ಗೊತ್ತಿತ್ತು ಎಂದರೆ ಸರಿ. ದಾವಾ ಸ್ವತ್ತಿನ ಪಹಣಿಯಲ್ಲಿ ರೇವಣಸಿದ್ದಪ್ಪ ತಂದೆ ಹೊನ್ನಪ್ಪ ಎಂದು ನಮೂದಿಸಿದ್ದು ಸದರಿ ಹೊನ್ನಪ್ಪ ನನ್ನ ತಂದೆ ಎಂದರೆ ಸರಿ.

ನನ್ನ ತಂದೆ ಹೊನ್ನಪ್ಪನಿಗೆ ಇಬ್ಬರು ಹಂಡಂದಿರು ಎಂದರೆ ಸರಿಯಲ್ಲ. ಮೊದಲನೆ ಹೆಂಡತಿ ಹೆಸರು ಸಾತಮ್ಮ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಾಯಿ ಮೊದಲನೆ ಹೆಂಡತಿ ಎಂದು ನುಡಿಯುತ್ತಾರೆ. ಸಾತಮ್ಮಳಿಗೆ ರೇವಣಸಿದ್ದಪ್ಪ, ಶಿವಕಾಂತಮ್ಮ ಮತ್ತು ರಮೇಶ ಎಂಬ 3-ಜನ ಮಕ್ಕಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಕರಕಿಹಳ್ಳಿಯಲ್ಲಿ ಶಾಲೆ ಕಲಿತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಕರಕಿಹಳ್ಳಿಯಲ್ಲಿ ಶಾಲೆ ಕಲಿತಿರುತ್ತಾರೆ ಎಂದು ದಾಖಲೆ ಹಾಜರುಪಡಿಸಿದ್ದು ಅವು ಸರಿಯಾಗಿವೆಯೋ ಇಲ್ಲವೊ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ. ವಾದಿ ಮತ್ತು 2, 3ನೆ ಪ್ರತಿವಾದಿಯರು 1ನೆ ಪ್ರತಿವಾದಿಯ ಮೊದಲನೆ ಹೆಂಡತಿ ಮಕ್ಕಳಿದ್ದು ಅವರಿಗೆ ಪಾಲು ಹೋಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ